

ಬಹರೇನ್ ಕನ್ನಡ ಸಂಘದ ಅಧ್ಯಕ್ಷ ಅಮರ್‌ನಾಥ್ ರೈ ಅವರಿಗೆ ಗೌರವ ಸಲ್ಲಿಕೆ



ಬಹರೇನ್ ಕನ್ನಡ ಸಂಘದ ಮಾಜಿ ಅಧ್ಯಕ್ಷ ಪ್ರದೀಪ್ ಶೆಟ್ಟಿ ಅವರಿಗೆ ಗೌರವ ಸಲ್ಲಿಕೆ

ಭವನದಲ್ಲಿ ಮಾಡಿರುವ ವ್ಯವಸ್ಥೆ ತೋರಿಸಿದರು.

'ವಿದೇಶದಲ್ಲಿ ಕನ್ನಡ ಭವನ ಹೊಂದಿರುವ ಏಕೈಕ ಕನ್ನಡ ಸಂಘ ಇದಾಗಿದೆ. ಕರ್ನಾಟಕದಿಂದ ಇಷ್ಟು ದೂರ ಬಂದು ಕನ್ನಡಿಗರು ಸಂಘಟಿತರಾಗಿ ಕನ್ನಡತನ ಉಳಿಸಿ, ಬೆಳೆಸುತ್ತಿರುವುದು ಎಲ್ಲರಿಗೂ ಮಾದರಿ' ಎಂದು ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ ಹೇಳಿದರು.

'ನಮ್ಮ ಊರಿನವರು ನಮ್ಮ ಕನ್ನಡಭವನಕ್ಕೆ

ಅವಾರ್ಡ್ ಪುರಸ್ಕೃತರಾದ ಪುಲಿಕೇಶಿ ನಗರ ಶಾಸಕ ಎ.ಸಿ ಶ್ರೀನಿವಾಸ್ ಮತ್ತು ವಿಧಾನಪರಿಷತ್ ಸದಸ್ಯ ಟಿ.ಎ ಶರವಣ ಮಾತನಾಡಿ, ಕನ್ನಡ ಭವನ ನಿರ್ಮಾಣ ಹಾಗೂ ಬಹರೇನ್ ಕನ್ನಡ ಸಂಘದ ಕಾರ್ಯಗಳನ್ನು ಶ್ಲಾಘಿಸಿದರು. ಪ್ರಶಸ್ತಿ ಪುರಸ್ಕೃತರು ಹಾಗೂ ಅವರ ಕುಟುಂಬ ಸದಸ್ಯರು ಕನ್ನಡಭವನ ಸುತ್ತು ಹಾಕಿ ವಿದೇಶಿ ನೆಲದಲ್ಲಿ ಕನ್ನಡಿಗರ ಕಾರ್ಯಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

# ಮಾಧ್ಯಮದವರಿಗೂ ಮೇಲ್ಮನೆಯಲ್ಲಿ ಅವಕಾಶ: ಹೊರಟ್ಟಿ

## ಈ ಕುರಿತು ಮುಂದಿನ ದಿನಗಳಲ್ಲಿ ಸಿಎಂಗೆ ಮನವಿ ಸಲ್ಲಿಸುತ್ತೇನೆ: ಹೊರಟ್ಟಿ | 38ನೇ ಪತ್ರಕರ್ತರ ಸಮಾವೇಶ ಸಮಾರೋಪ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಪ್ರಜಾಪ್ರಭುತ್ವದ ನಾಲ್ಕನೇ ಆಧಾರ ಸ್ತಂಭಕ್ಕೂ ಮೇಲ್ಮನೆಯಲ್ಲಿ ಸ್ಥಾನವಿದೆ. ಖಾದ್ರಿ ಶಾಮಣ್ಣನವರು ಪತ್ರಿಕಾ ರಂಗದಲ್ಲಿದ್ದ ಕಾರಣಕ್ಕೇ ಅವರಿಗೆ ಪರಿಷತ್ ಸದಸ್ಯತ್ವ ನೀಡಲಾಗಿತ್ತು. ಆಕಸ್ಮಿಕವಾಗಿ ಅಂಥ ಸಂದರ್ಭ ಒದಗಿ ಬಂದರೆ ಮಾಧ್ಯಮದವರ ಹೆಸರನ್ನು ನಾನೇ ಸೂಚಿಸುತ್ತೇನೆ. ಮಾಧ್ಯಮದವರು, ಸಂಗೀತ ಗಾರರು, ಶಿಕ್ಷಣ ತಜ್ಞರು ಪರಿಷತ್‌ನಲ್ಲಿರಬೇಕು. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಯವರಿಗೆ ಈ ಕುರಿತು ನಾನು ಮನವಿ ಸಲ್ಲಿಸುತ್ತೇನೆ ಎಂದು ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಹೇಳಿದರು.




ನಗರದ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಭಾನುವಾರ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಮಟ್ಟದ 38ನೇ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿದರು. ಈಗ ಎಲ್ಲೆಡೆ ಸಂಘಟನೆಗಳಿವೆ. ಶಾಸಕರ ವೇದಿಕೆಯಿಂದಲೂ ನಾವು ಸಂಘಟನೆ ಮಾಡಿಕೊಂಡಿದ್ದೇವೆ. ಸಂಘಟನೆ ಮೂಲಕ ನಾವು ಸಮಸ್ಯೆಗಳ ಪರಿಹಾರ ಮಾಡಿಕೊಳ್ಳಬಹುದು. ಸಂಘಟನೆ ಇಲ್ಲದಿದ್ದರೆ ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

### ಕನ್ನಡಪ್ರಭ, ಸುವರ್ಣ ನ್ಯೂಸ್‌ನ ನಾಲ್ವರಿಗೆ ಪ್ರಶಸ್ತಿ ಪ್ರದಾನ

ಪತ್ರಕರ್ತರ ಸಮಾವೇಶದಲ್ಲಿ ಕನ್ನಡಪ್ರಭ, ಏಷ್ಯಾನೆಟ್ ಸುವರ್ಣನ್ಯೂಸ್‌ನ ಒಟ್ಟು ನಾಲ್ವರಿಗೆ ಪ್ರಶಸ್ತಿ ವಿತರಿಸಲಾಯಿತು. ಕನ್ನಡಪ್ರಭದ ಪುಟ ವಿನ್ಯಾಸಕಾರ ಜಿ.ಎಂ.ಕೊಟ್ರೇಶ್, ಮೈಸೂರಿನ ಛಾಯಾಗ್ರಾಹಕ ಅನುರಾಗ್ ಬಸವರಾಜ್, ಅರಸೀಕೆರೆ ವರದಿಗಾರ ಪಿ.ಶಾಂತಕುಮಾರ್, ಸುವರ್ಣ ವಾಹಿನಿಯ ಕ್ಯಾಮೆರಾ ಮುಖ್ಯಸ್ಥ ಮೋಹನ್‌ರಾಜ್‌ಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಎಲ್ಲಾ ರಂಗಗಳು ಕೆಟ್ಟಿವೆ ಎಂದು ಪತ್ರಿಕಾ ರಂಗವೂ ಕೆಟ್ಟಿದೆ ಎನ್ನಲಾಗುವುದಿಲ್ಲ. ಕೆಲವರು ಮಾಡಿದ ತಪ್ಪಿಗೆ ಎಲ್ಲಾ ಪತ್ರಕರ್ತರನ್ನು ದೂಷಿಸಲಾಗದು. ಮಾಧ್ಯಮಗಳು ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಬದಲಿಸಬಹುದು. ರಾಷ್ಟ್ರಮಟ್ಟದಲ್ಲಿ ಮಾಧ್ಯಮಗಳಿಂದ ಸುಧಾರಣೆ ತರಲು ಸಾಧ್ಯವಿದೆ ಎಂದು ಅವರು ಹೇಳಿದರು.



ವಿನ್ಯಾಸಕಾರ ಜಿ.ಎಂ.ಕೊಟ್ರೇಶ್



ಛಾಯಾಗ್ರಾಹಕ ಅನುರಾಗ್ ಬಸವರಾಜ್



ವರದಿಗಾರ ಪಿ.ಶಾಂತಕುಮಾರ್



ಸುವರ್ಣ ನ್ಯೂಸ್ ಕ್ಯಾಮೆರಾ ಮುಖ್ಯಸ್ಥ ಮೋಹನ್

# ಸೈಬರ್ ಕ್ರೈಮ್‌ಗೆ ಅಕ್ರಮವಾಗಿ 42 ಸಿಮ್ ಖರೀದಿ?

## ಧರ್ಮಸ್ಥಳದಲ್ಲಿ ಐವರ ಬಂಧನ, ಜಾಮೀನು | ಒಬ್ಬನಿಗೆ ದುಬೈ ನಂಟು, ಎನ್‌ಐಎ ತನಿಖೆ ಸಾಧ್ಯತೆ

• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ಅನ್ಯರ ಹೆಸರಿನಲ್ಲಿ ಅಕ್ರಮವಾಗಿ 42 ಸಿಮ್ ಖರೀದಿಸಿ ಬೆಂಗಳೂರಿಗೆ ಕೊಂಡೊಯ್ದು

ದುಬೈ ನಂಟಿರುವ ಹಿನ್ನೆಲೆಯಲ್ಲಿ ರಾಷ್ಟ್ರೀಯ ತನಿಖಾ ದಳ(ಎನ್‌ಐಎ)ದ ಅಧಿಕಾರಿಗಳು ಪ್ರಕರಣದ ಕುರಿತು

ಕಲಂ 420, 120 ಬಿ ಜತೆಗೆ 34 ಐಪಿಸಿರಂತೆ ವಂಚನೆ, ಒಳಸಂಚು ಪ್ರಕರಣ ದಾಖಲಾಗಿದೆ. ಬಂಧಿತರಲ್ಲಿ ನಾಲ್ವರನ್ನು ಫೆ.2ರಂದು ಸಂಜೆ ಧರ್ಮಸ್ಥಳ ಪೊಲೀಸರು

ಇದೆ ಎಂದು ಹೇಳಲಾಗಿದೆ.

ಆರೋಪಿಯೊಬ್ಬ ದುಬೈನಲ್ಲಿ ಎರಡು ವರ್ಷ ಇದ್ದು, ನಾಲ್ಕು ತಿಂಗಳ ಹಿಂದಷ್ಟೇ ಊರಿಗೆ ಬಂದಿದ್ದ. ದುಬೈನಲ್ಲಿದ್ದುಕೊಂಡೇ ಅಕ್ರಮ ಸಿಮ್ ಖರೀದಿ ಮಾಡಿಸಿದ್ದ

# ಅಟಲ್ ಆಪ್ತ ಉಡುಪಿಯ ಸೋಮಶೇಖರ್ ಭಟ್ ನಿಧನ

## ಈ ಹಿಂದೆ ಕರೆ ಮಾಡಿ ಆರೋಗ್ಯ ವಿಚಾರಿಸಿದ್ದ ಮೋದಿ

• **ಕನ್ನಡಪ್ರಭ ವಾರ್ತೆ** ಉಡುಪಿ

ಆರ್.ಎಸ್.ಎಸ್. ಧುರೀಣ, ಬಿಜೆಪಿ ಹಿರಿಯ ಮುಖಂಡ



ಕೊರೋನಾ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಸೋಮಶೇಖರ್‌ಭಟ್ ಅವರಿಗೆ ದೂರವಾಣಿ ಮೂಲಕ ಕರೆ